ಮಾಡಲಾಗುವುದು.

ವಿಷಯ: ಮಾಗಡಿ-ಬೆಂಗಳೂರು ರಸ್ತೆ ರಾಷ್ಟ್ರೀಕರಣ.

2596 (4025)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ - ಬೆಂಗಳೂರು ಮಾರ್ಗವನ್ನು ರಾಷ್ಟ್ರೀಕರಣ ಮಾಡುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ; ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು; ಹಾಗಿಲ್ಲದಿದ್ದಲ್ಲಿ ರಾಷ್ಟ್ರೀಕರಣ ಮಾಡಲು ಇರುವ ಅಡಚಣೆಗಳೇನು?

ಆ) ರಾಷ್ಟ್ರೀಕರಣ ಮಾಡಲು ಸರ್ಕಾರದಿಂದ ನಿರ್ದಿಷ್ಟವಾದ ಮಾರ್ಗಸೂಚಿ ಹೊರಡಿಸಲಾಗಿದೆಯೇ? (ಮಾರ್ಗಸೂಚಿಯ ಪ್ರತಿ ನೀಡುವುದು)

ಇ) ಈ ಮಾರ್ಗ ಸೂಚಿಗೆ ಹೊರತಾದ ಯಾವ ಅಂಶದಿಂದ ಮಾಗಡಿ-ಬೆಂಗಳೂರು ರಸ್ತೆಯನ್ನು ರಾಷ್ಟ್ರೀಕರಣ ಮಾಡಲು ಸಾಧ್ಯವಾಗುವುದಿಲ್ಲ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು)

ಅ) ಇಲ್ಲ. ಉದ್ಭವಿಸುವುದಿಲ್ಲ.

ಸದರಿ ಮಾರ್ಗವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಪ್ರಯಾಣಿಕರಿಗೆ ಸಾಕಷ್ಟು ಸಂಖ್ಯೆಯಲ್ಲಿ ಸಾರಿಗೆ ಸೌಲಭ್ಯವನ್ನು ಖಾಸಗಿ ಪ್ರವರ್ತಕರು ಈಗಾಗಲೇ ಒದಗಿಸುತ್ತಿರುವುದರಿಂದ ಮತ್ತು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಷ್ಟ್ರೀಕೃತ ಮಾರ್ಗಗಳಲ್ಲಿ ಸಾರಿಗೆ ಸೌಕರ್ಯವನ್ನು ಅಗತ್ಯಕ್ಕೆ ತಕ್ಕಂತೆ ಹಾಗೂ ಉತ್ತಮವಾಗಿ ಒದಗಿಸಿಕೊಡಬೇಕಾಗಿರವುದರಿಂದ ಹಾಗೂ ಸಂಪನ್ಮೂಲಗಳ ಕೊರತೆಯಿಂದ ಈ ಮಾರ್ಗವನ್ನು ರಾಷ್ಟ್ರೀಕರಣ ಮಾಡುವ ಪ್ರಸ್ತಾವನೆಯನ್ನು ಸರ್ಕಾರವು ಕೈಗೆತ್ತಿಕೊಂಡಿರುವುದಿಲ್ಲ. ಆದರೂ ಸಹ ರಾಜ್ಯ ಸಾರಿಗೆ ಸಂಸ್ಥೆಯ ವತಿಯಿಂದ ಮಾಗಡಿ ತಾಲ್ಲೂಕಿನ 26 ಮಾರ್ಗಗಳಲ್ಲಿ ಸಂಚಾರ ವ್ಯವಸ್ಥೆ ಕಲ್ಪಿಸಿ ಸಾರಿಗೆ ಸೌಕರ್ಯವನ್ನು ಒದಗಿಸಿಕೊಡಲಾಗಿದೆ.

ಆ) ಇಲ್ಲ. ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ಮಾಗಡಿ ತಾಲ್ಲೂಕಿನ ಭಗಿನಗೆರೆ ತೋಟಗಾರಿಕೆ ಫಾರಂನಲ್ಲಿ ಮಾವಿನ

ಕಾಯಿ ಹರಾಜಿನಲ್ಲಿ ನಷ್ಟ.

2599 (4025)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) 1996-97, 97-98ನೇ ಸಾಲಿನಲ್ಲಿ ಮಾಗಡಿ ತಾಲ್ಲೂಕು ಭಗಿನಗೆರೆ ತೋಟಗಾರಿಕೆ ಫಾರಂನಲ್ಲಿ ಎಷ್ಟು ಮೊತ್ತಕ್ಕೆ ಮಾಪಿನ ಕಾಯಿ ಹರಾಜು ಮಾಡಲಾಗಿದೆ?

ಆ) ಅಧಿಕಾರಿಗಳ ಅಲಕ್ಷ್ಯತನದಿಂದ ಹರಾಜುದಾರರ ಕುತಂತ್ರದಿಂದ ಈ ಹರಾಜಿನಲ್ಲಿ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ನಷ್ಟವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಈ ನಷ್ಟದ ಮೊತ್ತವೆಷ್ಟು? ಈ ನಷ್ಟಕ್ಕೆ ಕಾರಣವೇನು? ಕಾರಣರಾದವರು ಯಾರು, ಈ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳುವುದು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) 1996-97ನೇ ಸಾಲಿನ ಮಾಪಿನ ಫಸಲನ್ನು ರೂ. 1,35,000.00ಗಳಿಗೆ ಹಾಗೂ 1997-98ನೇ ಸಾಲಿನ ಮಾಪಿನ ಫಸಲನ್ನು ರೂ. 2,61,875.00ಗಳಿಗೆ ಹರಾಜು ಮಾಡಲಾಗಿದೆ.

ಆ) ಹರಾಜುದಾರರ ಕುತಂತ್ರದಿಂದ 97-98ನೇ ಸಾಲಿನ ಹರಾಜ್‌ನಲ್ಲಿ ರೂ. 1,89,876.00 ಗಳು ನಷ್ಟವಾಗಿರುವುದು ಇಲಾಖಾ ಗಮನಕ್ಕೆ ಬಂದಿರುತ್ತದೆ. ಟೆಂಡರ್‌ದಾರರಾದ ಜೆ.ಚಂದ್ರನ್ ಬಿನ್ ಗೋವಿಂದ ಶೆಟ್ಟಿ ಮದನಪಲ್ಲಿ, ಕೃಷ್ಣಗಿರಿ ತಮಿಳುನಾಡು ಇವರು ಅತಿ ಹೆಚ್ಚು ಟೆಂಡರ್ ಮೊತ್ತ ರೂ. 4,51,251.00ಗಳನ್ನು ಸಲ್ಲಿಸಿದ್ದು ತೋಟಗಾರಿಕೆ ಜಂಟಿ ನಿರ್ದೇಶಕರು ಬೆಂಗಳೂರು ವಿಭಾಗದವರ ಶಿಫಾರಸ್ಸಿನ ಪ್ರಕಾರ ಅನುಮೋದನೆ ನೀಡಿ ಹಿರಿಯ ಸಹಾಯಕ ತೋಟಕಾರಿಕೆ ನಿರ್ದೇಶಕರು ಬೆಂಗಳೂರು (ಗ್ರಾ) ಜಿಲ್ಲೆರವರಿಗೆ ಆದೇಶ ಪ್ರತಿಯನ್ನು ಕಳುಹಿಸಲಾಗಿತ್ತು. ಮುಂದುವರಿದು ಟೆಂಡರ್ ಷರತ್ತಿನ ಅನ್ವಯ ಸದರಿ ಟೆಂಡರ್‌ದಾರರಿಂದ ಟೆಂಡರ್‌ನ ಶೇ.25 ಭಾಗದಷ್ಟು ಮೊತ್ತ ರೂ. 4.13 ಲಕ್ಷಗಳನ್ನು ಟೆಂಡರ್ ವೇಳೆಯಲ್ಲಿ ವಸೂಲಿ ಮಾಡಿಕೊಳ್ಳಲಾಗಿದೆ. ಉಳಿದ ಶೇ.75 ಕಟ್ಟಿ ಫಸಲನ್ನು ರೂಢಿಸಿಕೊಳ್ಳಲು ಟೆಂಡರ್‌ದಾರರಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು. ಬೆಂಗಳೂರು (ಗ್ರಾ) ಜಿಲ್ಲೆರವರು ಹಲವಾರು ತಿಳುವಳಿಕೆ ನೋಟೀಸ್‌ಗಳನ್ನು ಜಾರಿಮಾಡಿದ್ದಾಗ್ಯೂ ಬಾರದೆ ತಲೆತಪ್ಪಿಸಿಕೊಂಡ ಹಿನ್ನೆಲೆಯಲ್ಲಿ ಸದರಿ ಕ್ಷೇತ್ರಕ್ಕೆ ಭೇಟಿ ನೀಡಿದ ಇಲಾಖಾ ಪರಿಶೀಲನಾ ತಂಡದವರು ನೀಡಿದ ವರದಿ ದಿನಾಂಕ: 9-6-97ರಲ್ಲಿ ರೂ. 1,48,375.00 ಗಳಿಗೆ ಮರು ಅಂದಾಜು ಮಾಡಿರುತ್ತಾರೆ. ಮಳೆ ಗಾಳಿಗಳ ಕಾರಣ

ಹೆಚ್ಚು ಹಣ್ಣಾದ ಪಸಲು ಉದುರಿ ಹಾಳಾದ ಕಾರಣ ಹಾಗೂ ಟೆಂಡರ್‌ದಾರರು ತಲೆ ತಪ್ಪಿಸಿಕೊಂಡಿದ್ದರಿಂದ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟವನ್ನು ತಪ್ಪಿಸುವ ಉದ್ದೇಶದಿಂದ ಸದರಿ ಮಾವಿನ ಕಾಯಿಯ ಫಸಲನ್ನು ಇಲಾಖಾ ಮುಖಾಂತರ ಮರು ಅಂದಾಜಿಸಿರುವ ಮೊತ್ತ ರೂ. 1,48,375.00ಗಳಿಗೆ ಇಲಾಖಾ ಮುಖೇನ ಮಾರಾಟ ಮಾಡಲಾಗಿದೆ.

ಟೆಂಡರ್‌ದಾರರಾದ ಶ್ರೀ ಜೆ.ಚಂದ್ರನ್ ಇವರು ಮಾವಿನ ಫಸಲಿನ ನಷ್ಟಕ್ಕೆ ಕಾರಣರಾಗಿರುತ್ತಾರೆ.

ಇನ್ನು ಟೆಂಡರ್‌ದಾರರಿಗೆ ಶಿಕ್ಷಾಕ್ರಮವಾಗಿ ಅವರು ಹರಾಜಿನ ವೇಳೆಯಲ್ಲಿ ಸಲ್ಲಿಸಿದ ಶೇ.25ರಷ್ಟು ಹರಾಜಿನ ಮೊತ್ತ ರೂ.1,13,000-00ಗಳನ್ನು ಹರಾಜಿನ ಷರತ್ತಿನ ನಿಯಮಗಳ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ವಿಷಯ: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೊಸ ಡಿವಿಜನ್‌ಗಳು.

2600 (3278)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕ್ಯೂಣ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೊಸದಾಗಿ ಡಿವಿಜನ್‌ಗಳನ್ನು ರಚಿಸಲು ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ ಎಲ್ಲೆಲ್ಲಿ ಹೊಸ ಡಿವಿಜನ್‌ಗಳನ್ನು ರಚಿಸಲಾಗುವುದು?

ಇ) ಇದಕ್ಕಾಗಿ ಕೈಗೊಂಡ ಪೂರ್ವಭಾವಿ ಸಿದ್ಧತೆಗಳ ವಿವರ ನೀಡುವುದು?

ಈ) ಹೊಸದಾಗಿ ರಚಿಸಲಿರುವ ಡಿವಿಜನ್‌ಗಳಿಗೆ ಅಗತ್ಯ ಸಿಬ್ಬಂದಿ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆಯೇ?

ಉ) ಇದರಿಂದ ಆಗತಕ್ಕ ಪ್ರಯೋಜನಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.